

# ಮತ್ತೆ ಮತ್ತೆ ‘ರಾಮಾಯಣ’

‘ರಾಮಾಯಣ’ ಕಾಲಾತೀತ. ಬಾಬುಭಾಯ್ ಮಿಸ್ತ್ರಿ ಹಿಂದಿಯಲ್ಲಿ ‘ಸಂಪೂರ್ಣ ರಾಮಾಯಣ್’ ಚಿತ್ರ ನಿರ್ದೇಶನ ಮಾಡಿದ್ದರು. ಮಹಿಲಾಲ್, ಅನಿತಾ ಗುಹಾ ರಾಮ–ಸೀತೆಯಾಗಿ ನಟಿಸಿದ್ದ ಈ ಸಿನಿಮಾ 1961ರಲ್ಲಿ ತೆರೆಕಂಡಿತ್ತು. ಅನಿತಾ ಗುಹಾ ಆ ಕಾಲಘಟ್ಟದಲ್ಲಿ ಜನಪ್ರಿಯರೂ ಆದರು. ಲತಾ ಮಂಗೇಶ್ಕರ್ ಎರಡು ಹಾಡುಗಳನ್ನು ಚಿತ್ರಕ್ಕಾಗಿ ಹಾಡಿದ್ದರು. ಮೂರು ತಾಸಿಗೂ ಹೆಚ್ಚು ಅವಧಿಯ ಚಿತ್ರ ಅದು. ಆಮೇಲೆ ಟಿ.ವಿ.ಯಲ್ಲಿ ಧಾರಾವಾಹಿ ರೂಪದಲ್ಲಿ ‘ರಾಮಾಯಣ’ ದೊಡ್ಡ ಸಂಖ್ಯೆಯ ಜನರ ಕಣ್ಣು ಕೀಲಿಸಿಕೊಂಡಿದ್ದನ್ನೂ ಕಂಡೆವು. ಆ ರಾಮಾಯಣ ಕೂಡ ಈಗ ಯೂಟ್ಯೂಬ್‌ನಲ್ಲಿ ನೋಡಲು ಸಿಗುತ್ತದೆ.



ಇದು ವಿಎಫ್‌ಎಕ್ಸ್ ಕಾಲ. ಹೀಗಾಗಿ ಮತ್ತೆ ‘ರಾಮಾಯಣ’ಕ್ಕೆ ಕಾಲ ಕೂಡಿಬಂದಿದೆ. ಹೃತಿಕ್ ರೋಷನ್ ರಾವಣನಾಗಿ ಅಭಿನಯಿಸಲು ಜೈ ಅಂದರೆ, ರಾಮನಾಗಲು ರಣಬೀರ್ ಕಪೂರ್ ಒಪ್ಪಿದ್ದಾರೆ. ನಿತೇಶ್ ತಿವಾರಿ ಈ ಚಿತ್ರದ ಸ್ಕ್ರಿಪ್ಟ್ ತಿದ್ದುತ್ತಿದ್ದು, ಮುಂದಿನ ವರ್ಷದ ನಡುಘಟ್ಟದಲ್ಲಿ ಸಿನಿಮಾ ಸೆಟ್ಟೇರುವ ನಿರೀಕ್ಷೆ ಇದೆ. ಅಲ್ಲು ಅರವಿಂದ್, ಮಧು ಮಂಟೆನಾ, ನಮಿತ್ ಮಲ್ಹೋತ್ರಾ ನಿರ್ಮಾಣಕ್ಕೆ ಆಸಕ್ತಿ ತೋರಿದ್ದಾರೆ.

‘ರಾಮಾಯಣ’ದ ಹೂರಣ ಇಟ್ಟುಕೊಂಡು ಇದೊಂದೇ ಸಿನಿಮಾ ತಯಾರಾಗುತ್ತಿಲ್ಲ. ಈಗಾಗಲೇ ಓಂ ರಾವತ್ ನಿರ್ದೇಶನದ ‘ಆದಿಪುರುಷ್’ನಲ್ಲಿ ಪ್ರಭಾಸ್ ರಾಮನಾಗಿಯೂ, ಕೃತಿ ಸನನ್ ಸೀತೆಯಾಗಿಯೂ ಅಭಿನಯಿಸುತ್ತಿದ್ದಾರೆ. ಸೈಫ್ ಅಲಿ ಖಾನ್ ರಾವಣ. ಅದಲ್ಲದೆ ‘ಸೀತಾ’ ಹೆಸರಿನ ಚಿತ್ರದಲ್ಲಿ ಕಂಗನಾ ರನೋಟ್ ನಟಿಸುವ ಸುದ್ದಿಯೂ ಹರಿದಾಡುತ್ತಿದೆ. ‘ರಾಮ್‌ಸೇತು’ ಸಿನಿಮಾದ ಚಿತ್ರೀಕರಣದಲ್ಲಿ ಅದಾಗಲೇ ಅಕ್ಷಯ ಕುಮಾರ್ ತೊಡಗಿಕೊಂಡಿದ್ದಾರೆ. ಹೀಗಾಗಿ ಇದು ರಾಮಾಯಣದ ಕಾಲ. ಅಷ್ಟೇ ಅಲ್ಲ, ‘ಮಹಾಭಾರತ’ದ ಕಥನವನ್ನೂ ಸಿನಿಮಾ ಆಗಿಸುವ ಯತ್ನಗಳು ನಡೆದಿದ್ದು, ದೀಪಿಕಾ ಪಡುಕೋಣೆ ದ್ರೌಪದಿ ಪಾತ್ರಕ್ಕೆ ಜೀವತುಂಬಲಿದ್ದಾರೆ.

‘ದಂಗಲ್’, ‘ಚಿಚೋರೆ’ ತರಹದ ಯಶಸ್ವಿ ಸಿನಿಮಾಗಳನ್ನು ಕೊಟ್ಟಿರುವ, ‘ಚಿಲ್ಲರ್ ಪಾರ್ಟಿ’ ಮೂಲಕ ರಾಷ್ಟ್ರಪ್ರಶಸ್ತಿ ಗಳಿಸಿದ ನಿತೇಶ್ ತಿವಾರಿ ಮೂರು ಭಾಗಗಳಲ್ಲಿ ‘ರಾಮಾಯಣ’ ನಿರ್ದೇಶಿಸಲಿದ್ದಾರೆ ಎನ್ನಲಾಗುತ್ತಿದೆ. ವಿಎಫ್‌ಎಕ್ಸ್ ಬಳಕೆಯಿಂದ ಈ ರಾಮಾಯಣ ಅದು ಹೇಗೆ ಮೂಡಿಬರಲಿದೆಯೋ ನೋಡಬೇಕು. ■



■ ವಿಶಾಖ ಎನ್.

# ನಾಸಿರುದ್ದೀನ್ ಭಾವುಕ ನುಡಿ

ನಾಸಿರುದ್ದೀನ್ ಷಾ ಜುಲೈ 20ಕ್ಕೆ 72ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದರು. ಜನ್ಮದಿನದ ಸಂಕಲ್ಪ ಏನು ಎಂದು ಮಾಧ್ಯಮದವರು ಹಾಕಿದ ಪ್ರಶ್ನೆಗೆ, ನಗುವಿನ ಉತ್ತರ ಚೆಲ್ಲಿದರು. ‘ಇಷ್ಟವಾದ ಸಿನಿಮಾ ಮಾಡುತ್ತಾ ಖುಷಿಯಾಗಿರಬೇಕಷ್ಟೆ’ ಎಂದು ಆ ನಗುವಿಗೆ ಅರ್ಥವನ್ನೂ ತೊಡಿಸಿದರು.

ಬಾಲ್ಯದಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುವ ಪರಿಪಾಟವೇ ಇರಲಿಲ್ಲ ಎಂದ ಅವರು, ಈಗ ವಯಸ್ಸಾಗುವುದೆಂದರೆ ಹೊಣೆಗಾರಿಕೆಯ ಭಾರ ಹೆಚ್ಚಿದಂತೆ ಎನ್ನುತ್ತಾರೆ. 50 ವರ್ಷ ತುಂಬಿದ ನಂತರದಿಂದಲೂ ಅವರನ್ನು ನೈತಿಕ ಎಚ್ಚರಿಕೆ ಕಾಡುತ್ತಿದೆಯಂತೆ. ಅದರ ಆಧಾರದ ಮೇಲೆಯೇ ಅಭಿನಯದ ಅವಕಾಶ ಒಪ್ಪಿಕೊಳ್ಳುತ್ತಿರುವುದಾಗಿ ಹೇಳುವ ಅವರಿಗೆ ಈಗಲೂ ರಂಗಭೂಮಿಯೇ ಆಪ್ತ. ಅದು ಕಲಿಸುವ ಬದುಕಿನ ಪಾಠಗಳು, ಸಾಮಾಜಿಕ ಎಚ್ಚರಿಕೆಯೇ ಇದುವರೆಗೆ ತಾವು ನಟನಾಗಿ ಜೀವಂತವಿರಲು ಸಾಧ್ಯಮಾಡಿದ್ದು ಎಂದೂ ಅವರು ಹೇಳಿಕೊಳ್ಳುತ್ತಾರೆ.

‘ಈಗ ನನಗೆ ಒಂದಿಡೀ ಚಿತ್ರವನ್ನು ಹೊತ್ತುಕೊಂಡು ಅಭಿನಯಿಸಲು ಆಗದು. ದಣಿವಾಗಿಬಿಡುತ್ತದೆ. ಯಾವುದು ನನ್ನ ಮನಸ್ಸಿಗೆ ಖುಷಿ ಕೊಡುವುದೋ ಅದನ್ನಷ್ಟೆ ಒಪ್ಪಿಕೊಂಡು ಅಭಿನಯಿಸಬೇಕಷ್ಟೆ. ನನ್ನ ಬದುಕು ಮುಗಿದಮೇಲೆ ನಗಣ್ಯ ಎನ್ನಿಸಿಕೊಳ್ಳಬಾರದು ಎಂದು ಮನಸ್ಸು ಸದಾ ಹೇಳುತ್ತಲೇ ಇರುತ್ತದೆ’ ಎಂದೂ ಅವರು ಭಾವುಕರಾದರು. ■

